**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -766/2023**
**ಚಾಸಾ - 03 / ಪ್ರಾಸಾ - 02**

| | |
|---|---|
| ಹೆಸರು | **ಮಾರೇಗೌಡ** |
| ತಂದೆಯ ಹೆಸರು | **ಮುದ್ದಪ್ಪ** |
| ವಯಸ್ಸು | **49** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಗೌಡಹಳ್ಳಿ** |

**ದಿನಾಂಕಃ 30-01-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಪ್ರಾಸಾ-1 ಮತ್ತು ಚಾಸಾ-2 ರವರು ನನ್ನ ಮಾವ. ಆರೋಪಿಗಳು ನಮ್ಮ ಗ್ರಾಮದವರು. ಸುಮಾರು ಒಂದು ವರ್ಷದ ಹಿಂದೆ ಚಾಸಾ-2 ರವರು ಹಾಕಿದ್ದ ಟಮೋಟೋ ಗಿಡದ ಬಳಿ ನಾನು ಕೆಲಸವನ್ನು ಮಾಡುತ್ತಿದ್ದಾಗ, ಆರೋಪಿಗಳು ಬಂದು ಗಲಾಟೆಯನ್ನು ಮಾಡಿದರು. ಆಗ ಚಾಸಾ-2 ರವರು ಪ್ರಾಸಾ-1 ರವರಿಗೆ ಕರೆಯನ್ನು ಮಾಡಿದಾಗ ಪ್ರಾಸಾ-1 ರವರು ಅಲ್ಲಿಗೆ ಬಂದರು. ಆಗ ಆರೋಪಿಗಳು ದೊಣ್ಣೆಯಿಂದ ಪ್ರಾಸಾ-1 ರವರಿಗೆ ಹೊಡೆದರು. ಈಗ ಸಾಕ್ಷಿಗೆ ಮುದ್ದೆ ಮಾಲು-1 ಮತ್ತು 2 ತೋರಿಸಿದ್ದು, ಅದರಿಂದ ಆರೋಪಿಗಳು ಪ್ರಾಸಾ-1 ರವರಿಗೆ ಹೊಡೆದಿರುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿದ್ದಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.07-12-2023 ರಂದು ಮಧ್ಯಾಹ್ನ ಸುಮಾರು 1 ಗಂಟೆ ಸಮಯದಲ್ಲಿ ನೀವು ನಿಮ್ಮ ಜಮೀನಿನ ಬಳಿ ಇದ್ದಾಗ , ನಿಮ್ಮ ಗ್ರಾಮದ ಚಾಸಾ-2 ರವರು ಸರ್ವೆ ನಂ.155/1 ರಲ್ಲಿ ಟಮೋಟೋ ಸಸಿಗಳನ್ನು ಹಾಕುತ್ತಿದ್ದಾಗ ಆರೋಪಿಗಳು ಅಲ್ಲಿಗೆ ಬಂದು ಸದರಿ ಜಮೀನು ಅವರದ್ದು ಎಂದು ಹೇಳಿ ಗಲಾಟೆ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ ಚಾಸಾ-2 ರವರು ಪ್ರಾಸಾ-1 ರವರಿಗೆ ಕರೆ ಮಾಡಿ ನಿಮಗೆ ಜಮೀನಿನ ಬಗ್ಗೆ ಸ್ವಲ್ಪ ತಿಳುವಳಿಕೆ ಇರುವುದರಿಂದ ಅಲ್ಲಿಗೆ ಬಂದು ಅವರಿಗೆ ಸ್ವಲ ಬುದ್ದಿ ಹೇಳು ಎಂದು ಹೇಳಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆ ಸಮಯದಲ್ಲಿ ಪ್ರಾಸಾ-1 ರವರು ಮೋಟಾರ್ ಸೈಕಲ್ ನಲ್ಲಿ ಚಾಸಾ-2 ರವರ ಜಮೀನಿನ ಬಳಿ ಬಂದಾಗ ಆರೋಪಿಗಳು ಅಲ್ಲೆ ಇದ್ದರು ಮತ್ತು ಚಾಸಾ-2 ರವರು ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ತರಲು ಮನೆಗೆ ಹೋದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಷ್ಟರಲ್ಲಿ ಮಧ್ಯಾಹ್ನ 1.20 ಗಂಟೆಯಲ್ಲಿ ಆರೋಪಿಗಳು ಪ್ರಾಸಾ-1 ರವರಿಗೆ ಬೈದು ಗಲಾಟೆ ಮಾಡಿ ದೊಣ್ಣೆಯಿಂದ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಜಗಳವನ್ನು ನೀವು, ಚಾಸಾ-4 ಮತ್ತು ಜಮೀನಿನ ಬಳಿ ವಾಪಸ್ಸು ಬಂದ ಚಾಸಾ-2 ರವರು ಬಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪ್ರಾಸಾ-1 ರವರ ಬಲಗಾಲು , ಬಲಗೈ ಬೆರಳಿಗೆ ಏಟಾಗಿತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಪ್ರಾಸಾ-1 ರವರನ್ನು ವಿಚಾರಿಸಿದಾಗ ಆರೋಪಿಗಳು ತಮ್ಮ ತಾತನ ಕಾಲದಿಂದಲೂ ಸದರಿ ಜಮೀನು ಅವರಿಗೆ ಸೇರಿದ ಮತ್ತು ಅವರ ಬಳಿ ಕಾಗದ ಪತ್ರ ಇದೆಯಾ ಎಂದು ಕೇಳಿದಾಗ ಆರೋಪಿಗಳು ಅವರನ್ನು ಗುರಾಯಿಸಿದರು 1 ನೇಆರೋಪಿಯು ಏಕಾಏಕಿ ಪ್ರಾಸಾ-1 ರವರ ಮೇಲೆ ಕೋಪ ಗೊಂಡು ಹಳೆಯ ದ್ವೇಷವನ್ನು ಇಟ್ಟುಕೊಂಡು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1 ನೇ ಆರೋಪಿಯು ಪ್ರಾಸಾ-1 ರವರಿಗೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ, ಪ್ರಾಸಾ ತೆಗೆದು ಸಾಯಿಸಿ ಬಿಡುತ್ತೇವೆ ಎಂದು ಅಲ್ಲೆ ಬಿದ್ದಿದ ದೊಣ್ಣೆಯಿಂದ ಅವರ

ಬಲಗಾಲಿಗೆ ಹೊಡೆದು, ಕೈಯಿಂದ ಮುಖಕ್ಕೆ ಗುದ್ದಿ ಕಾಲಿನಿಂದ ಒದ್ದು ಕೆಳಗೆ ಬೀಳಿಸಿ ಮನಬಂದಂತೆ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 2 ನೇ ಆರೋಪಿಯು ಪ್ರಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಪ್ರಾಣ ಸಹಿತ ಬಿಡುವುದು ಬೇಡ ಎಂದು ಹೇಳಿ ಅಲ್ಲೆ ಇದ್ದ ದೊಣ್ಣೆಯಿಂದ ಅವರ ಬಲಗೈ ಬೆರಳಿಗೆ ಹೊಡೆದರು, ಅಷ್ಟರಲ್ಲಿ ನೀವು ಮತ್ತು ಚಾಸಾ-4 ರವರು ಜಗಳವನ್ನು ಬಿಡಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಆರೋಪಿಗಳು ಪ್ರಾಸಾ-1 ರವರಿಗೆ ಈ ದಿನ ನೀವು ಬದುಕಿಕೊಂಡೆ ಮುಂದೆ ಒಂದು ದಿನ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ನಿನ್ನ ಕುಟುಂಬ ಊರಿನಲ್ಲಿ ಯಾವ ರೀತಿ ಬದುಕುತ್ತಾರೆ ನೋಡೋಣ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕೃತ್ಯವು ನಡೆದು ಸುಮಾರು 3 ವರ್ಷಗಳು ಆಗಿರುವ ಕಾರಣ ನೀವು ಈ ಮೇಲೆ ಹೇಳಿರುವ ವಿಷಯವನ್ನು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಎಂ. ಎಂ, ವಕೀಲರಿಂದಃ-**

**1.** ಇಂದು ನ್ಯಾಯಾಲಯಕ್ಕೆ ನಿಮ್ಮನ್ನು ಪ್ರಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಇಂದು ನ್ಯಾಯಾಲಯಕ್ಕೆ ಬರಲು ನನಗೆ ಪೋಲೀಸರು ಕರೆ ಮಾಡಿ ತಿಳಿಸಿದರು. ನೀವು, ಪ್ರಾಸಾ-1, ಚಾಸಾ-2 , 4 ರಿಂದ 6 ರವರು ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಚಾಸಾ-2 ರವರ ಅಣ್ಣನಾದ ನಾಗೇಂದ್ರರವರ ಅಳಿಯ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಊರಿನಿಂದ ಕರೆಕಲ್ ಪಾಳ್ಯಕ್ಕೆ ಸುಮಾರು 15 ರಿಂದ 20 ಕಿ. ಮೀ.ನಷ್ಟು ಅಂತರವಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕೃತ್ಯಕ್ಕೆ ಸಂಬಂಧಿಸಿದಂತೆ ಇದೇ ಮೊದಲ ಬಾರಿಗೆ ನೀವು ಹೇಳಿಕೆಯನ್ನು ನೀಡುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

2. ನಾನು ನನ್ನ ಹೇಳಿಕೆಯಲ್ಲಿ ಚಾಸಾ-2 ರವರ ಜಮೀನಿನಲ್ಲಿ ಕೆಲಸವನ್ನು ಮಾಡುತ್ತಿದ್ದೇನೆ ಎಂದು ಹೇಳಿರುತ್ತೇನೆ. ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಸಹ ಕೃತ್ಯ ನಡೆದ ಸ್ಥಳದಲ್ಲಿ ಇರಲಿಲ್ಲ. ಪ್ರಾಸಾ-1 ರವರು ಬಂದ ಮೋಟಾರ್ ಸೈಕಲ್ ನ ಸಂಖ್ಯೆ ನನಗೆ ಗೊತ್ತಿಲ್ಲ. ಗಲಾಟೆ ಆದ ತಕ್ಷಣ ಚಾಸಾ-6 ರವರು ಸ್ಥಳಕ್ಕೆ ಬಂದಿರುತ್ತಾರೆ. ಪ್ರಾಸಾ-1 ರವರನ್ನು ಚಾಸಾ-5 ಮತ್ತು 6 ರವರು ಆಸ್ಪತ್ರೆಗೆ ಕರೆದುಕೊಂಡರು ಹೋದರು. ನೀವು ಘಟನಾ ಸ್ಥಳದಲ್ಲಿ ಇದ್ದ ಪಕ್ಷದಲ್ಲಿ ಪ್ರಾಸಾ-1 ರವರನ್ನು ನೀವು ಸಹ ಆಸ್ಪತ್ರೆಗೆ ಕರೆದುಕೊಂಡು ಹೋಗಿತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರಾಸಾ-1 ರವರಿಗೆ ರಕ್ತಗಾಯಗಳು ಆಗಿತ್ತು. ಪ್ರಾಸಾ-1 ರವರ ಕಾಲು ಮತ್ತು ಕೈಗೆ ಏಟಾಗಿರುತ್ತದೆ .

3. ಮುದ್ದೆ ಮಾಲು-1 ಮತ್ತು 2 ನ್ನು ಇದೇ ಮೊದಲ ಬಾರಿಗೆ ನೀವು ನೋಡುತ್ತೀದ್ದೀರಾ ಎಂದರೆ ಸಾಕ್ಷಿಯು ಕೃತ್ಯ ನಡೆದ ಸಮಯದಲ್ಲಿ ನೋಡಿದ್ದೇನು ಎನ್ನುತ್ತಾರೆ. ಆರೋಪಿಗಳು ಪ್ರಾಸಾ-1 ರವರ ಮೇಲೆ ಮುದ್ದೆ ಮಾಲು-1 ಮತ್ತು 2 ರಿಂದ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಆರೋಪಿಗಳ ಸ್ವತ್ತನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ನೀವು ಪ್ರಾಸಾ-1 ರವರು ನೀಡಿರುವ ಸುಳ್ಳು ದೂರಿಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**

**ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | |
| ತಂದೆಯ / ಗಂಡನ ಹೆಸರು | |
| ವಯಸ್ಸು | |
| ಉದ್ಯೋಗ | ವ್ಯವಸಾಯ |
| ವಿಳಾಸ | |

ದಿನಾಂಕಃ **07-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ -**

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ಪಾಟೀ ಸವಾಲು- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ಪಾಟೀ ಸವಾಲು - ಆರೋಪಿ ಪರ ಶ್ರೀ.** ವಕೀಲರಿಂದ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**